## ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

**ಸ್ಪೆಷಲ್ ಕೇಸ್ ನಂಃ 756/2023**

| | ಚಾಸಾಃ 2 | ಅಸಾಃ 16 |
|---|---|---|
| ಹೆಸರು | ಭಾಗ್ಯ | |
| ತಂದೆಯ ಹೆಸರು : | ರಾಜೇಗೌಡ | |
| ವಯಸ್ಸು: | 50 ವರ್ಷ | |
| ಕೆಲಸಃ | ಕೂಲಿ | |
| ವಾಸಸ್ಥಳ | ಗೋಣಿಕೊಪ್ಪಲು ಗ್ರಾಮ | |

ದಿನಾಂಕಃ **12/12/2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು ಅವಿದ್ಯಾವಂತೆ. ಹೆಬ್ಬೆಟ್ಟಿನ ಗುರುತು ಹಾಕುತ್ತೇನೆ. ನನ್ನ ಯಜಮಾನರು ತೀರಿಕೊಂಡು 2 ವರ್ಷವಾಗಿರುತ್ತದೆ. ನನಗೆ ಒಬ್ಬಳು ಮಗಳು ಅವಳ ಮದುವೆಯಾಗಿರುತ್ತದೆ. ನಾನು ಒಬ್ಬಳೆ ವಾಸವಿರುತ್ತೇನೆ. 2 ವರ್ಷದ ಹಿಂದೆ ನಾನು ಪಾಳ್ಯದಲ್ಲಿದ್ದೆ. ಆಗ ಕೂಲಿ ಕೆಲಸ ಮಾಡುತ್ತಿದ್ದೆ. 1 ರಿಂದ 4 ಜನ ಆರೋಪಿತರುಗಳನ್ನು ನಾನು ನೋಡಿಲ್ಲ. ನನಗೆ ಮೃತ ಕಾಂತರಾಜು ಗೊತ್ತಿಲ್ಲ. ಅವರು ಯಾವ ಊರು ಅವರ ಜಾತಿ ಗೊತ್ತಿಲ್ಲ. ಕಾಂತರಾಜು ಯಾವ ಕಾರಣಕ್ಕೆ ಹೇಗೆ ತೀರಿಕೊಂಡರು ಎಂದು ಗೊತ್ತಿಲ್ಲ. ಚಾಸಾ-3, ಚಾಸಾ-6 ರವರು ಗೊತ್ತಿಲ್ಲ. ಪೊಲೀಸರಿಗೆ ಈ ಬಗ್ಗೆ ಹೇಳಿಕೆ ಕೊಟ್ಟಿಲ್ಲ. ಆರೋಪಿತರಿಗೂ ಮೃತನಿಗೂ ಆಗಿರುವ ಗಲಾಟೆಯನ್ನು ನಾನು ನೋಡಿಲ್ಲ. ನೋಡಿದ್ದೇನೆ ತಿಳಿದುಕೊಂಡಿದ್ದೇನೆ ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಅಭಿಯೋಗದ ಕೇಸಿಗೆ ಸಾಕ್ಷಿ ಪ್ರತಿಕೂಲ ಸಾಕ್ಷಿ ನುಡಿದಿದ್ದು ಮಾನ್ಯ ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

<u>ಪಾಟೀಸವಾಲುಃ ಎಸ್‌ಪಿಪಿ ರವರಿಂದಃ</u>

ದಿ. 2023 ರ 2 ವರ್ಷಗಳ ಹಿಂದೆ ಚಾಸಾ-6 ರವರ ಅನ್ನಪೂರ್ಣೇಶ್ವರ ಹೊಟೇಲ್‌ನಲ್ಲಿ ಪಾತ್ರೆ ತೊಳೆಯುವ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಚಾಸಾ-2 ರವರ ಮನೆಯ ಒಂದು ರೂಂ ಅನ್ನು ಬಾಡಿಗೆ ಮಾಡಿಕೊಂಡು ವಾಸವಾಗಿರುತ್ತೇನೆ ಎಂದರೆ ಸರಿ. ಚಾಸಾ-1 ರವರು ಒಬ್ಬರೇ ಇದ್ದು ಅವರಿಗೆ  ತಿಂಗಳಿಗೆ 600 ರುಪಾಯಿ ಬಾಡಿಗೆ ಕೊಡುತ್ತಿದ್ದೆ ಎಂದರೆ ಸರಿ.

ದಿ. 17.10.2023 ರಂದು ರಾತ್ರಿ ನಾನು ಊಟ ಮಾಡಿ ಮಲಗಿದ್ದೆ ಎಂದರೆ ಸಾಕ್ಷಿ ನಾನು ಆ ದಿನ ಊರಿಗೆ ಹೋಗಿದ್ದೆ. ಆಗ ಚಾಸಾ-3 ರವರು ಬಾಗಿಲು ತೆಗೆದು ಹೊರಗಡೆ ಹೋಗಿ ನೋಡಿದಾಗ ಆಗ ಗಲಾಟೆಯಾಗುತ್ತಿತ್ತು ಎಂದರೆ ಸರಿಯಲ್ಲ. ನಾನು ಕೂಡ ಹೋಗಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿಯೇ ಇನ್ನೊಂದು ಗಲ್ಲಿ ಕಡೆ ರೂಂ ನಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. 4 ಜನ ಆರೋಪಿತರು  ಮೃತ ಕಾಂತರಾಜುವಿಗೆ ನಿನ್ನನ್ನು ಸುಮ್ಮನೆ' ಬಿಡುವುದಿಲ್ಲಾ ಎಂದು ರೋಡ್ ಮೇಲೆ ಎಳೆದಾಡಿಕೊಂಡು ಹೊಡೆಯುತ್ತಿದ್ದರು ಅದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ನಾನು ನೋಡಿ ಎಲ್ಲವನ್ನು ತಿಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1ನೇ ಆರೋಪಿಯವರು ಲಾರಿ ಕ್ಲಿನರ್ ಅವನು ನಮ್ಮ ಹೋಟೆಲ್ ಗೂ ಬಂದು ಆಗಾಗ ಹೆಲ್ಪರ್ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ.

1ನೇ ಆರೋಪಿ ಒಂಥರಾ ರೌಡಿ ಇದ್ದಂಗೆ, ನಾನು ಮತ್ತು ಕಾಂತರಾಜು ಹೋಟೆಲ್ ನಲ್ಲಿ ಹತ್ತಿರ ನಗ್ತಾ ನಗ್ತಾ ಮಾತಾಡಿದ್ರೆ ಉರ್ಕೊಳ್ಳೋನು ಆ ವೆಂಕಟೇಶನಿಗೆ ಸಂಬಂಧದ ಬೆಲೆನೇ ಗೊತ್ತಿಲ್ಲಾ ಎಲ್ಲಾದು ಕೆಟ್ಟ ದೃಷ್ಟಿಲೇ ನೋಡ್ತಾನೆ ಎಂದು ಮಾತನಾಡುತ್ತಿದ್ದು ಅದನ್ನು 1ನೇ ಆರೋಪಿ ನೋಡಿ ಸಿಟ್ಟು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಉಳಿದ 3 ಜನ ಆರೋಪಿತರು ಅನ್ನಪೂರ್ಣೇಶ್ವರಿ ಹೋಟೆಲ್ ಗೆ ಪ್ರತೀ ದಿನ ಊಟ ತಿಂಡಿಗೆ ಬರುತ್ತಿದ್ದರು

ಎಂದರೆ ಸಾಕ್ಷಿ ನಾನು ಒಳಗೆ ಇರುತ್ತಿದ್ದೆ ಅವರನ್ನು ನೋಡಿಲ್ಲ. ಆ 4 ಜನನೂ ಒಟ್ಟಿಗೆ ಇದ್ದು ನಮ್ಮ ಮನೆಯಿಂದ ಸ್ವಲ್ಪ ಕೆಳಗೆ ದೇವಸ್ಥಾನದ ಹತ್ತಿರ ಇರುವ ಮನೆಯಲ್ಲಿ, ವಾಸ ಇದ್ದರು ಎಂದರೆ ಗೊತ್ತಿಲ್ಲ. ಚಾಸಾ-2 ರವರು 4 ಜನ ಆರೋಪಿತರಿಗೂ ಬೈಯುತ್ತಾ ಕಾಂತ ಕುಡಿದ್ದಾನೆ ಅವನಿಗೆ ಯಾಕೆ ಇಂಗೆ ಹೊಡಿತಿದ್ದೀರಾ ಅಂತಾ ಹೇಳಿದ್ದು, ಅದಕ್ಕೆ ಅವರು ಕಾಂತ ಭಾಗ್ಯನ್ನ ರೂಂ ಹತ್ತಿರ ನಿಂತಿದ್ದ, ಕೇಳಿದ್ರೆ, ನಮ್ಮಗೇ ಅವಾಜ್ ಆಗ್ತಾನೆ, ಈ ನನ್ನ ಮಗನನ್ನು ಇಂಗೇ ಬಿಟ್ರೆ ಆಗಲಾ ಒಂದು ಗತಿ ಕಾಣಿಸುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿ ಅಲ್ಲೇ ಬಿದ್ದಿದ್ದ ಬಾಳೆ ಗೊನೆ ದಿಂಡಿನಲ್ಲಿ ಕಾಂತರಾಜುವಿಗೆ ಸಿಕ್ಕಾಪಟ್ಟೆ ಹೊಡೆಯುತ್ತಿದ್ದಾ ಎಂದರೆ ನಾನು ಊರಿನಲ್ಲಿ ಇರಲಿಲ್ಲ. ಉಳಿದ 3 ಜನ ಆರೋಪಿತರು ಕಾಂತರಾಜುನನ್ನು ಸಿಮೆಂಟ್ ರಸ್ತೆಯ ಮೇಲೆ ಎಳೆದಾಡಿ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ. ಆಗ ಕೂಡಾ ಚಾಸಾ-3 ರವರು ಪುನಃ ಬೈದಿದ್ದು ಆರೋಪಿತರು ಬಿಟ್ಟಿಲ್ಲ ಎಂದರೆ ಸರಿಯಲ್ಲ.

ನಂತರ ಆರೋಪಿತರು ಮೃತನನ್ನು ಪೈಂಟ್ ಅಂಗಡಿಯ ಹತ್ತಿರ ಹೊಡೆಯುತ್ತಾ ಎಳೆದುಕೊಂಡು ಹೋದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-6 ರವರು ಕೂಡ ಆರೋಪಿತರಿಗೆ ಹೊಡೆಯಬೇಡಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಇವರೆಲ್ಲರೂ ಹೇಳಿದರೂ ಕೂಡ ಆರೋಪಿತರು ಮೃತನಿಗೆ ಹೊಡೆದಿರುತ್ತಾರೆ ಅದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಆಗ ಸಮಯ ರಾತ್ರಿ ಸುಮಾರು 11.00 ಗಂಟೆ ಆಗಿತ್ತು, ಮನೆಯ ಮುಂದೆ ಇದ್ದ ಬೀದಿ ದೀಪದ ಬೆಳಕಿನಲ್ಲಿ ಎಲ್ಲಾ ಕಾಣುತ್ತಿತ್ತು ಎಂದರೆ ಸರಿಯಲ್ಲ. ನಾವೆಲ್ಲರೂ ಮನೆಗೆ ಹೋಗಿ ಮಲಗಿಕೊಂಡೆವು ಎಂದರೆ ಸರಿಯಲ್ಲ. ಬೆಳಿಗ್ಗೆ ಎದ್ದ ತಕ್ಷಣ ನಮ್ಮ ರಸ್ತೆಯ ಮುಂದಿನ ಸರ್ಕಲ್‌ನಲ್ಲಿ ಸುಮಾರು ಜನ ನಿಂತಿದ್ದರು ಎಂದರೆ ಸರಿಯಲ್ಲ. ಕಾಂತರಾಜುವನ್ನು ಕೊಲೆ ಮಾಡಿ ರಸ್ತೆ ಪಕ್ಕ ಬಿಸಾಡಿ ಹೋಗಿದ್ದರು ಎಂದರೆ ಸರಿಯಲ್ಲ. ರಾತ್ರಿ ಹೊಡೆಯುತ್ತಿದ್ದ ಆರೋಪಿತರೇ ಕಾಂತರಾಜುವನ್ನು

ಕೊಲೆ ಮಾಡಿರುತ್ತಾರೆ ಎಂಬ ವಿಚಾರ ಗೊತ್ತಾಯಿತು ಎಂದರೆ ಸಾಕ್ಷಿ ನಾನು ಊರಿನಲ್ಲಿ ಇರಲಿಲ್ಲ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈ ಬಗ್ಗೆ ದಿ. 20.10.2023 ರಂದು ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-33 ಎಂದು ಗುರುತಿಸಲಾಯಿತು.

ನಿಪಿ-33 ರ ವಿಷಯ ಗೊತ್ತಿದ್ದರೂ ಆರೋಪಿತರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಯಾರೂ ಒತ್ತಾಯ ಮಾಡಿಲ್ಲ, ಪ್ರಭಾವ ಬೀರಿಲ್ಲ, ನಾನು ಸ್ವತಃ ಸಾಕ್ಷಿ ನುಡಿಯುತ್ತಿದ್ದೇನೆ.

ಪಾಟೀ ಸವಾಲುಃ ಎಲ್ಲಾ ಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ಪಾಟೀ ಸವಾಲು ಏನು ಇಲ್ಲವೆಂದು ತಿಳಿಸಿರುತ್ತಾರೆ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ